# ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

## Bangalore Mysore Infrastructure Corridor Area Planning Authority

ನಂ. 5, 2ನೇ ಮಹಡಿ, ಲೂಪ್‌ಲೇನ್,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 009.
ಫೋನ್ : 080 22341230/35

No. 5, Second Floor,
Looplane, Race Course Road, Bengaluru - 560 009.
Tel : 080 22341230/35 E-mail : bmicapa@gmail.com


ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ-01/04/2019-20 /2021

ದಿನಾಂಕ: 16 JAN 2020

**ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ**

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2-ಎ)ರಡಿಯಲ್ಲಿ)**

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 28/1ರಲ್ಲಿ 02ಎ-07ಗು ಮತ್ತು ಸರ್ವೆ ಸಂಖ್ಯೆ:28/3ರಲ್ಲಿ 02ಎ-07ಗು ಒಟ್ಟು 04ಎ-14ಗು ವಿಸ್ತೀರ್ಣದ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ:11.06.2019
2. ದಿನಾಂಕ:08.07.2019ರಂದು ಜರುಗಿದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:39.4ರ ತೀರ್ಮಾನ
3. ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ:04.01.2020
4. ಕರೂರು ವೈಶ್ಯ ಬ್ಯಾಂಕ್, ಬೆಂಗಳೂರು ಇಲ್ಲಿನ ಡಿ.ಡಿ.ಗಳ ಸಂಖ್ಯೆ 845408, 845409, 845410, ದಿನಾಂಕ:06.01.2020

*******

**ಪ್ರಸ್ತಾವನೆ**

ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ. ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ ಮತ್ತು ಶ್ರೀ ಐವಾಲಗಯ್ಯ ನವರ ಜಿಪಿಎ ದಾರರಾದ ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ ಇವರ ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ, ನಂ:1125/12, ಮೊದಲನೇ ಮಹಡಿ, ಸರ್ವೀಸ್ ರಸ್ತೆ, ಹಂಪಿನಗರ, ವಿಜಯ ನಗರ 2ನೇ ಹಂತ, ಬೆಂಗಳೂರು-560104 ಇವರು ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:28/1ರಲ್ಲಿ 02ಎ-07ಗು ಮತ್ತು ಸರ್ವೆ ಸಂಖ್ಯೆ:28/3ರಲ್ಲಿ 02ಎ-07ಗು ಒಟ್ಟು 04ಎ-14ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಉಲ್ಲೇಖ(1)ರ ಮನವಿಯಲ್ಲಿ ಕೋರಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು-1, ಕೆ.ಐ.ಎ.ಡಿ.ಬಿ (ಬಿ.ಎಂ.ಐ.ಸಿ.ಪಿ) ರವರ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ಎಲ್‌ಎಕ್ಯೂ(1)/ಸಿ.ಆರ್:/87/2016-17, ದಿನಾಂಕ:19.10.2016ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು,

ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:28/1ರ 04ಎ-14ಗು ಜಮೀನು ಭೂಸ್ವಾಧೀನವಾಗಿರುವುದಿಲ್ಲವೆಂದು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು-2, ಕೆ.ಐ.ಎ.ಡಿ.ಬಿ ರವರ ಪತ್ರ ಸಂಖ್ಯೆ:ಬೆಂಗಳೂರು/ವಿಭೂಸ್ವಾಅ-2/2158/2016-17, ದಿನಾಂಕ:01.10.2016ರಲ್ಲಿ ಸರ್ವೆ ಸಂಖ್ಯೆ:28/1ರ 04ಎ-14ಗು ಜಮೀನು ಈ ಕಛೇರಿಯಿಂದ ಭೂಸ್ವಾಧೀನಪಡಿಸಲು ಅಧಿಸೂಚನೆಯನ್ನು ಹೊರಡಿಸಿರುವುದು ಕಂಡುಬರುತ್ತಿಲ್ಲವೆಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ-2, ಕೆಐಎಡಿಬಿ ರವರ ಪತ್ರ ಸಂಖ್ಯೆ:ಬೆಂಗಳೂರು/ವಿಭೂಸ್ವಾಅ-2/2814/2018-19, ದಿನಾಂಕ:17.01.2019ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:28/1ರ ಜಮೀನು ಈ ಕಛೇರಿಯಿಂದ ಭೂಸ್ವಾಧೀನಪಡಿಸಲು ಅಧಿಸೂಚನೆಯನ್ನು ಹೊರಡಿಸಿರುವುದು ಕಂಡುಬರುತ್ತಿಲ್ಲ ಎಂದು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ-2, ಕೆಐಎಡಿಬಿ ರವರ ಪತ್ರ ಸಂಖ್ಯೆ: ಬೆಂಗಳೂರು/ವಿಭೂಸ್ವಾಅ-2/2815/2018-19, ದಿನಾಂಕ:17.01.2019ರಲ್ಲಿ ಸರ್ವೆ ಸಂಖ್ಯೆ:28/3ರಲ್ಲಿ 02ಎ-07ಗು ಜಮೀನು ಈ ಕಛೇರಿಯಿಂದ ಭೂಸ್ವಾಧೀನಪಡಿಸಲು ಅಧಿಸೂಚನೆಯನ್ನು ಹೊರಡಿಸಿರುವುದು ಕಂಡುಬರುತ್ತಿಲ್ಲವೆಂದು ಮಾಹಿತಿಗಳನ್ನು ನೀಡಿರುತ್ತಾರೆ.

ಸರ್ಕಾರದಿಂದ ಅನುಮೋದನೆಯಾದ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಅನುಮೋದಿತ ಮಹಾಯೋಜನೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 28/1ರಲ್ಲಿ 02ಎ-07ಗು ಮತ್ತು ಸರ್ವೆ ಸಂಖ್ಯೆ:28/3ರಲ್ಲಿ 02ಎ-07ಗು ಒಟ್ಟು 04ಎ-14ಗು ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 117 ಮೈಅಪ್ರಾ 2018, ಬೆಂಗಳೂರು, ದಿನಾಂಕ:17.10.2018ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:28/1ರ 04ಎ-14ಗು ವಿಸ್ತೀರ್ಣದ ಜಮೀನನ್ನು ವ್ಯಸವಾಯ ವಲಯದಿಂದ ವಸತಿ ಉದ್ದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಂತೆ ಭೂ ಉಪಯೋಗ ಬದಲಾವಣೆಗೆ ಅನುಮೋದನೆ ನೀಡಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ನಯೋ-3/ ಭೂಉಬ/ 29/2016-17, ದಿನಾಂಕ:29.11.2018ರಲ್ಲಿ ಭೂ ಉಪಯೋಗ ದೃಢೀಕರಣ ಪತ್ರ ನೀಡಲಾಗಿದೆ.

ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ :LAND10015104, ದಿನಾಂಕ:29.05.2019 ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 28/3ರಲ್ಲಿ 02ಎ-07ಗು ಮತ್ತು LAND10015096, ದಿನಾಂಕ:29.05.2019ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 28/1ರಲ್ಲಿ 02ಎ-07ಗು ಒಟ್ಟು 04ಎ-14ಗು ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

ಪ್ರಸ್ತಾವನೆಯನ್ನು ಉಲ್ಲೇಖ(2)ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿ, ಸಭೆಯು "*ಅರ್ಜಿದಾರರು ಮೂಲಭೂತ ಸೌಕರ್ಯ ಒದಗಿಸುವ ಸಂಬಂಧ ಸ್ಥಳೀಯ ಸಂಸ್ಥೆಯ ದೃಢೀಕರಣ ಪತ್ರ ಹಾಗೂ ವಿದ್ಯುಚ್ಛಕ್ತಿ ಒದಗಿಸುವ ಸಂಬಂಧ ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿಯಿಂದ ನಿರಾಕ್ಷೇಪಣಾ ಪತ್ರಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ಪಡೆದು ಸಲ್ಲಿಸಿರುವುದರಿಂದ, ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ವಸತಿ ವಿನ್ಯಾಸ ನಕ್ಷೆಯನ್ನು ವಲಯ ನಿಯಮಾವಳಿಯನ್ವಯ ತಿದ್ದುಪಡಿ ಮಾಡಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2-ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ*".

ಪ್ರಾಧಿಕಾರದ ಸಭೆಯ ನಿರ್ಣಯದಂತೆ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ಪ್ರಾಧಿಕಾರದ ವಲಯ ನಿಯಮಗಳಂತೆ ಇರವುದರಿಂದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕುರಿತು ಅಗತ್ಯ ಶುಲ್ಕಗಳನ್ನು ಪಾವತಿಸಲು ಉಲ್ಲೇಖ(3)ರ ಪತ್ರದಲ್ಲಿ ಅರ್ಜಿದಾರಿಗೆ ತಿಳಿಸಲಾಗಿತ್ತು. ಅದರಂತೆ, ಅರ್ಜಿದಾರರು ಉಲ್ಲೇಖ(4)ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.

ಅರ್ಜಿದಾರರು ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರದ ವಲಯ ನಿಯಮಾವಳಿಗೆ ಅನುಗುಣವಾಗಿ ವಸತಿ ವಿನ್ಯಾಸವನ್ನು ತಯಾರಿಸಿದ್ದು, ಅದರಲ್ಲಿ ವಸತಿಗಾಗಿ 9435.81ಚ.ಮೀ (ಶೇಕಡ 53.60), ಉದ್ಯಾನವ ಮತ್ತು ಬಯಲುಜಾಗಕ್ಕಾಗಿ 1762.45ಚ.ಮೀ (ಶೇಕಡ 10.01), ನಾಗರೀಕ ಸೌಲಭ್ಯಕ್ಕಾಗಿ 881.82ಚ.ಮೀ (ಶೇಕಡ 05.01) ಹಾಗೂ ರಸ್ತೆಗಾಗಿ 5523.50ಚ.ಮೀ (ಶೇಕಡ 31.38) ಪ್ರದೇಶವನ್ನು ನಿಗಧಿಪಡಿಸಲಾಗಿದೆ ಹಾಗೂ ಸದರಿ ವಸತಿ ವಿನ್ಯಾಸದಲ್ಲಿ ವಿವಿಧ ಅಳತೆಯ ಒಟ್ಟು 70 ನಿವೇಶನಗಳು ಒಳಗೊಂಡಿರುತ್ತದೆ. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ

ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2-ಎ)ರಡಿಯಲ್ಲಿ ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

16 JAN 2020

**ಆದೇಶ ಸಂ: ಬಿಎಂಐಸಿಎಪಿಎ/ವಿನ್ಯಾಸ-01/04/2019-20, ದಿನಾಂಕ:**

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 28/1ರಲ್ಲಿ 02ಎ-07ಗು ಮತ್ತು ಸರ್ವೆ ಸಂಖ್ಯೆ:28/3ರಲ್ಲಿ 02ಎ-07ಗು ಒಟ್ಟು 04ಎ-14ಗು ವಿಸ್ತೀರ್ಣದ ಜಮೀನಿಗೆ ತಹಶೀಲ್ದಾರರು ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ರವರು ದೃಢೀಕರಿಸಿ ನೀಡಿರುವ ಸರ್ವೆ ನಕ್ಷೆ ಆಧಾರದ ಮೇಲೆ ವಿನ್ಯಾಸ ನಕ್ಷೆಯನ್ನು ಪರಿಶೀಲಿಸಿದ್ದು, ಸದರಿ ನಕ್ಷೆಯನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ (For Demarcation and Development purpose only) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2-ಎ)ರನ್ವಯ ಈ ಕೆಳಕಂಡ ಷರತ್ತಿಗೊಳಪಡಿಸಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

1. ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ಕನಿಷ್ಠ ಮೂರು (03) ತಿಂಗಳ ಮೊದಲೇ ನವೀಕರಿಸಿಕೊಳ್ಳತಕ್ಕದ್ದು.
2. ವಸತಿ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸುವ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ (For Demarcation and Development purpose only) ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಿನ್ಯಾಸದಲ್ಲಿನ ಯಾವುದೇ ನಿವೇಶನಗಳನ್ನು ಪರಭಾರೆ ಹಾಗೂ ನಿವೇಶನಗಳನ್ನು ನೋಂದಣಿ ಮಾಡಿಸತಕ್ಕದ್ದಲ್ಲ.
3. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು. ಜಮೀನಿನಲ್ಲಿ ಅಳವಡಿಸುವಾಗ ಅಳತೆಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಪ್ರಾಧಿಕಾರದಿಂದ ವಿನ್ಯಾಸದಲ್ಲಿ ಆಗಬಹುದಾದ ಮಾರ್ಪಾಡುಗಳಿಗೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.
4. ಸದರಿ ಅನುಮೋದನೆಯು ವಿಶೇಷ ಭೂಸ್ವಾಧೀನಾಧಿಕಾರಿಗಳು-1, ಕೆಐಎಡಿಬಿ(ಬಿಎಂಐಸಿಪಿ) ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳು-2, ಕೆಐಎಡಿಬಿ, ಬೆಂಗಳೂರು ಇವರುಗಳು ನೀಡಿರುವ ನಿರಾಕ್ಷೇಪಣಾ ಪತ್ರಕ್ಕೆ ಅನುಗುಣವಾಗಿ ನೀಡಲಾಗಿರುತ್ತದೆ.
5. ಪ್ರಸ್ತಾಪಿತ ವಸತಿ ವಿನ್ಯಾಸದ ಜಮೀನು ಬಿಎಂಐಸಿ ಯೋಜನೆ ಮತ್ತು ಇತರ ಯೋಜನೆಗೆ ಭೂಸ್ವಾಧೀನಕ್ಕೆ ಸೇರಿದ್ದಲ್ಲಿ ಅಂತಹ ವಿಸ್ತೀರ್ಣವನ್ನು ಅರ್ಜಿದಾರರು ಯಾವುದೇ ತಂಟೆತಕರಾರು ಇಲ್ಲದೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರಕ್ಕೆ ಬಿಟ್ಟುಕೊಡತಕ್ಕದ್ದು. ತದನಂತರ ಪರಿಷ್ಕೃತ ವಿನ್ಯಾಸ ನಕ್ಷೆಗೆ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
6. ಪ್ರಶ್ನಿತ ಜಮೀನಿನಲ್ಲಿ ಸರ್ಕಾರಿ ಖರಾಬು ಇದ್ದಲ್ಲಿ, ಸದರಿ ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

21va/Ba 100% 17(2A)

7. ಪ್ರಸ್ತಾಪಿತ ವಸತಿ ವಿನ್ಯಾಸ ಜಮೀನಿನಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಸದಸ್ಯ-ಕಾರ್ಯದರ್ಶಿಗಳು, ಬಿಎಂಐಸಿಎಪಿಎ ಇವರು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

8. ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

9. ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಹಾಗೂ ಸಂಬಂಧಿತ ನಿಯಮಗಳು, 2017ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಕೊಳ್ಳದೇ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಜಾಹೀರಾತು ನೀಡುವುದಾಗಲೀ, ಬುಕಿಂಗ್ ಮಾಡುವುದಾಗಲೀ ಅಥವಾ ಮಾರಾಟ ಮಾಡುವಂತಿಲ್ಲ.

10. **(a)** ವಿನ್ಯಾಸದಲ್ಲಿನ ಸಿವಿಲ್ ಕಾಮಗಾರಿ, ವಿದ್ಯುತ್ ಸೌಲಭ್ಯ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ಉದ್ಯಾನವನ ಅಭಿವೃದ್ಧಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಚಾಲ್ತಿಯಲ್ಲಿರುವ ದರಪಟ್ಟಿಯಂತೆ ವಿವರವಾದ ಅಂದಾಜು ಪಟ್ಟಿಯಂತೆ ಕಾರ್ಯಾದೇಶ ಪಡೆದು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ತೃಪ್ತಿಕರವಾಗಿ ಅಭಿವೃದ್ಧಿಪಡಿಸತಕ್ಕದ್ದು.

**(b)** ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆ ಬದಿಚರಂಡಿ, ಕಲ್ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಎಲ್ಲಾ ಸಿವಿಲ್ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಂದ ಕಾರ್ಯಾದೇಶ ಪಡೆದು, ಸದರಿ ಸಂಸ್ಥೆಯ ಉಸ್ತುವಾರಿಯಲ್ಲಿ ಅಭಿವೃದ್ಧಿಪಡಿಸಿ ಮುಕ್ತಾಯ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**ಬಡಾವಣೆಯಲ್ಲಿ ಎಲ್ಲಾ ರಸ್ತೆಗಳ ಪಕ್ಕದಲ್ಲಿ ನೀರು ಹರಿಯಲು ಚರಂಡಿ (Open drain) ಗಳನ್ನು ನಿರ್ಮಿಸುವುದು. ಒಂದುವೇಳೆ, Saucer drain ನಿರ್ಮಿಸಿದಲ್ಲಿ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸತಕ್ಕದ್ದು.**

**(c)** ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ (Sewage disposal Unit) ವ್ಯವಸ್ಥೆ ಕಾಮಗಾರಿಗಳನ್ನು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಇಂದ ಕಾಯಾದೇಶ ಪಡೆದು ಸದರಿ ಸಂಸ್ಥೆಯ ಉಸ್ತುವಾರಿಯಲ್ಲಿ ತೃಪ್ತಿಕರವಾಗಿ ಕಾರ್ಯಗತಗೊಳಿಸಿ, / ಸಕ್ಷಮ ಪ್ರಾಧಿಕರ ರವರಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು.

**(d)** ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧೀಕರಣ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ (Bescom) ಮಂಡಳಿ ರವರಿಂದ ಕಾರ್ಯಾದೇಶ ಪಡೆದು Bescom ರವರ ಉಸ್ತುವಾರಿಯಲ್ಲಿ ತೃಪ್ತಿಕರವಾಗಿ ಕಾರ್ಯಗತಗೊಳಿಸಿ, Service Certificate ಸಲ್ಲಿಸತಕ್ಕದ್ದು.

**(e)** ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಉದ್ಯಾನವನ ಪ್ರದೇಶಗಳನ್ನು ತೋಟಗಾರಿಕೆ ಇಲಾಖೆಯು ನಿಗಧಿಪಡಿಸಿರುವ ವಿಧಾನದಲ್ಲಿ ಅಭಿವೃದ್ಧಿಪಡಿಸಿ, ಸದರಿ ಇಲಾಖೆಯಿಂದ ಉದ್ಯಾನವನ ಅಭಿವೃದ್ಧಿಪಡಿಸಿರುವ ಬಗ್ಗೆ ಪ್ರಮಾಣ ಪತ್ರ/ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

(f) ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಕ್ರಮವಹಿಸುವುದು.

(g) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

(h) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

(i) ಪ್ರಾಧಿಕಾರದ ಪರಿಶೀಲನೆಗೊಳಪಡಿಸಿದ ನಂತರ, ವಿನ್ಯಾಸದಲ್ಲಿ ಕಾಯ್ದಿರಿಸಿರುವ ನಾಗರೀಕ ಸೌಲಭ್ಯ ಜಾಗೆ, ಉದ್ಯಾನವನ ಮತ್ತು ಬಯಲುಜಾಗೆಗಳಿಗೆ ಕಲ್ಲು ಕಟ್ಟಡ ತಳಪಾಯ ನಿರ್ಮಿಸಿ, Entry ಮತ್ತು Exit ಜಾಗಗಳಿಗೆ ಅಡಚಣೆಯಾಗದಂತೆ ಚೈನ್‌ಲಿಂಕ್ ಫೆನ್ಸಿಂಗ್ ನಿರ್ಮಿಸತಕ್ಕದ್ದು.

(j) ಅಭಿವೃದ್ಧಿದಾರರು ಉದ್ಯಾನವನ ಹಾಗೂ ಬಯಲುಜಾಗೆಗಳಿಗೆ ಕಾಯ್ದಿರಿಸಿರುವ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಬದಿಗಳಲ್ಲಿ ಗಿಡ/ಮರಗಳನ್ನು ಬೆಳೆಸುವುದು.

(k) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿ ಹಾದು ಹೋಗಿರುವ ನಾಲಾಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಲು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಅಥವಾ ಕಂದಾಯ ಇಲಾಖೆಯ ಸಂಬಂಧಿತ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪತ್ರ ಪಡೆದು ನಂತರ ಸೇತುವೆಯನ್ನು ನಿರ್ಮಿಸುವುದು.

11. ವಸತಿ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ, ಅಭಿವೃದ್ಧಿಪಡಿಸಿ ಪ್ರಾಧಿಕಾರದ ಪರಿಶೀಲನೆಗೆ ಒಳಪಡಿಸಿದ ನಂತರ, ಸಾರ್ವಜನಿಕ ಉದ್ದೇಶದ ಜಾಗೆಗಳಾದ ನಾಗರೀಕ ಸೌಲಭ್ಯದ ನಿವೇಶನಗಳನ್ನು ಈ ಯೋಜನಾ ಪ್ರಾಧಿಕಾರಕ್ಕೆ, ಉದ್ಯಾನವನ ಹಾಗೂ ಬಯಲುಜಾಗೆ ಮತ್ತು ರಸ್ತೆ ಪ್ರದೇಶಗಳನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿರವರಿಗೆ ನೊಂದಾಯಿಸಿ ಪರಿತ್ಯಜನಾ ಪತ್ರದ (Registered Relinquishment deed) ಮುಖಾಂತರ ಹಸ್ತಾಂತರಿಸತಕ್ಕದ್ದು. ಸದರಿ ನೋಂದಾಯಿತ ಪರಿತ್ಯಜನಾ ಪತ್ರದ ದಾಖಲೆ ಸಲ್ಲಿಸಿದ ನಂತರವಷ್ಟೇ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

12. ಪ್ರಾಧಿಕಾರದಿಂದ ಕೆಟಿಸಿಪಿ ಕಾಯ್ದೆ ಕಲಂ 17(2-ಬಿ)ರನ್ವಯ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯುವವರೆಗೂ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳಿಗೆ ಸ್ಥಳೀಯ ಸಂಸ್ಥೆಯು ಖಾತಾ ತೆರೆಯತಕ್ಕದ್ದಲ್ಲ.

13. ವಸತಿ ವಿನ್ಯಾಸಕ್ಕೆ ಪ್ರಾಧಿಕಾರದಿಂದ ಕಡ್ಡಾಯವಾಗಿ ಅಂತಿಮ ಅನುಮೋದನೆ ಪಡೆಯುವವರೆಗೂ ವಿನ್ಯಾಸದಲ್ಲಿನ ಯಾವುದೇ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 15ರಡಿ ಪ್ರಾಧಿಕಾರದಿಂದ ಅನುಮತಿಸಲು ಅವಕಾಶವಿರುವುದಿಲ್ಲ. ಆದುದರಿಂದ, ಸದರಿ ವಸತಿ ವಿನ್ಯಾಸಕ್ಕೆ ಪ್ರಾಧಿಕಾರದಿಂದ ಅಂತಿಮ ಅನುಮೋದನೆ ಪಡೆಯುವವರೆಗೂ ಹಾಗೂ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿರವರು ಕಟ್ಟಡ ಪರವಾನಿಗೆಯನ್ನು ನೀಡತಕ್ಕದ್ದಲ್ಲ.

14. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

15. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
16. ತಾತ್ಕಾಲಿಕ ವಸತಿ ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ವಿನ್ಯಾಸಕ್ಕೆ ಪ್ರಾಧಿಕಾರವು ನೀಡಿರುವ ತಾತ್ಕಾಲಿಕ ಅನುಮೋದನೆ ರದ್ದುಪಡಿಸಲಾಗುವುದು.

ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯನ್ನು ರದ್ದುಪಡಿಸಲು ಕ್ರಮವಹಿಸಲಾಗುವುದು ಹಾಗೂ ಕೆಟಿಸಿಪಿ ಕಾಯ್ದೆ, 1961ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

16/01/2020

ಸದಸ್ಯ-ಕಾರ್ಯದರ್ಶಿಗಳು (ಪ್ರ),
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ಗೆ,
ಮೆ॥ ಕೆ.ಎನ್.ಎಸ್ ಇನ್ ಫ್ರಾಸ್ಟ್ರಕ್ಚರ್ ಪ್ರೈ.ಲಿ.
ಪರವಾಗಿ ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ
ಮತ್ತು ಶ್ರೀ ಐವಾಲಗಯ್ಯ ರವರ ಜಿಪಿಎ ದಾರರಾದ
ಮೆ॥ ಕೆ.ಎನ್.ಎಸ್ ಇನ್ ಫ್ರಾಸ್ಟ್ರಕ್ಚರ್ ಪ್ರೈ.ಲಿ ಇವರ ಪರವಾಗಿ
ನಿರ್ದೇಶಕರು, ಶ್ರೀ ಕೆ.ಎನ್.ಬೋರೇಗೌಡ,
ನಂ:1125/12, ಮೊದಲನೇ ಮಹಡಿ,
ಸರ್ವೀಸ್ ರಸ್ತೆ, ಹಂಪಿನಗರ, ವಿಜಯ ನಗರ 2ನೇ ಹಂತ,
ಬೆಂಗಳೂರು-560104

24va/Ba 100% 17(2A)